ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ, ಉಡುಪಿ.

ಸಿ.ಸಿ.:38/2019

ಸಿ.ಡಬ್ಲ್ಯು.1 ಪಿ.ಡಬ್ಲ್ಯೂ : 1

| | |
|---|---|
| ಸಾಕ್ಷಿದಾರರ ಹೆಸರು | ರೊನಾಲ್ಡ್ ಡೇನಿಯರ್ ಸಲ್ಡಾನ |
| ತಂದೆಯ ಹೆಸರು | ಲೇಟ್ ಎಡ್ವಿನ್ ಇಲಿಯಾಸ್ ಸಲ್ಡಾನ |
| ವಯಸ್ಸು | 54 ವರ್ಷ |
| ಉದ್ಯೋಗ | ವ್ಯವಹಾರ |
| ವಾಸಸ್ಥಳ | ನೇಜಾರ್ ಉಡುಪಿ. |

ದಿನಾಂಕಃ 16.09.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ದ.ಪ್ರ.ಸಂ. 299 ರಡಿಯಲ್ಲಿನ ವಿಚಾರಣೆಃ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ

ಮಣಿಪಾಲದಲ್ಲಿ ಮಾಂಡವಿ ಪ್ಯಾಲೇಷ್ ಅಂಡ್ ಅಪಾರ್ಟ್ ಮೆಂಟ್ ಮತ್ತು ಕಮರ್ಷಿಯಲ್ಲಿ ಅಪಾರ್ಟ್ ಮೆಂಟ್ ಕಟ್ಟಡದಲ್ಲಿ ವೀಮ್ಸ್ ಡೈಲಿ ನೀಡ್ಸ್ ಎಂಬ ಸೂಪರ್ ಮಾರ್ಕೆಟ್ ನ್ನು ಸುಮಾರು 16 ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದೇವೆ. ದಿನಾಂಕ 24.04.2016 ರಂದು ರಾತ್ರಿ ಸುಮಾರು 8.15 ರ ಸಮಯಕ್ಕೆ ನಮ್ಮ ಅಂಗಡಿಯ ಬಾಗಿಲನ್ನು ಹಾಕಿಕೊಂಡು ಹೋಗಿದ್ದೆನು. ದಿನಾಂಕ 25.04.2016 ರಂದು ನನ್ನ ಸ್ನೇಹಿತೆ ಜಸಿಂತ ಸಲ್ಡಾನರವರು ಬೆಳಿಗ್ಗೆ 8.30 ರ ಸಮಯದಲ್ಲಿ ಕರೆ ಮಾಡಿ ನಿಮ್ಮ ಅಂಗಡಿಯ ಬಾಗಿಲು ತೆಗೆದಿದೆ ಎಂದು ತಿಳಿಸಿದರು. ಕೂಡಲೇ ಅಂಗಡಿಯ ಬಳಿ ಬಂದು ನೋಡಿದೆನು. ಅಂಗಡಿಯ 3 ಬಾಗಿಲುಗಳ ಪೈಕಿ ಒಂದು ಬಾಗಿಲು ಬೆಂಡಾಗಿದ್ದದ್ದು ಕಂಡುಬಂದಿತು. ಇನ್ನೊಂದು ಸರಿಯಾಗಿದ್ದ ಬಾಗಿಲಿನ ಬೀಗವನ್ನು ತೆಗೆದು ಒಳಗೆ ಹೋಗಿ ನೋಡಿದಾಗ ಕ್ಯಾಷ್ ಕೌಂಟರ್ ನಲ್ಲಿಟ್ಟಿದ್ದ ಪ್ಲಾಸ್ಟಿಕ್ ಡಬ್ಬಿ ಮತ್ತು ಅದರಲ್ಲಿದ್ದ ಸುಮಾರು 17,500/- ರೂ.ಗಳು ಕಾಣೆಗೆಯಾಗಿರುವುದು ಕಂಡುಬಂದಿತು. ಆ ಬಗ್ಗೆ ನಾನು ಪೋಲೀಸಿನವರಿಗೆ ದೂರು ನೀಡಿದೆನು. ಸಾಕ್ಷಿಯವರು ದೂರು ಮತ್ತು ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ, ಮೂಲ ದೂರಿನ ಪ್ರತಿಯನ್ನು ಸಿಸಿ 68/2017 ರಲ್ಲಿ ಸಲ್ಲಸಲಾಗಿದೆ ಯಥಾ ಪ್ರತಿಯನ್ನು ನಿಪಿ.1 ಎಂದು ಗುರುತಿಸಲಾಯಿತು.

ಅದೇ ದಿನ ಪೋಲೀಸಿನವರು ನಮ್ಮ ಅಂಗಡಿಯ ಬಳಿ ಶ್ವಾನದಳ ಹಾಗೂ ಬೆರಳಚ್ಚು ತಜ್ಞರೊಂದಿಗೆ ನಮ್ಮ ಅಂಗಡಿಗೆ ಬಂದಿದ್ದರು. ನಾನು ಘಟನೆಯಾದ ಸ್ಥಳವನ್ನು ತೋರಿಸಿದೆನು. ಪೋಲೀಸಿನವರು ಅದನ್ನು ಪರಿಶೀಲಿಸಿ ಪಂಚನಾಮೆಯನ್ನು ಮಾಡಿದರು. ಸಾಕ್ಷಿಯವರು ಪಂಚನಾಮೆಯನ್ನು ಮತ್ತು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿರುತ್ತಾರೆ, ಮೂಲ ಪ್ರತಿಯನ್ನು ಸಿಸಿ 67/2018 ರಲ್ಲಿ ಸಲ್ಲಿಸಲಾಗಿದೆ. ಪಂಚನಾಮೆಯನ್ನು ಯಥಾ ಪ್ರತಿಯನ್ನು ನಿಪಿ.2 ಎಂದು ಗುರುತಿಸಲಾಯಿತು.

ದ.ಪ್ರ.ಸಂ.299 ರಡಿಯಲ್ಲಿ ಸಾಕ್ಷ್ಯವನ್ನು ದಾಖಲಿಸಿಕೊಂಡಿರುವುದರಿಂದ ಪಾಟೀ ಸವಾಲು ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ. ಮತ್ತು ಎಸಿಜೆಎಂ ಉಡುಪಿ.